## ಸರಿಗಮಪಗೆ ಸಲಾಂ

ಝೀ ವಾಹಿನಿಯಲ್ಲಿ ವಾರಾಂತ್ಯದಲ್ಲಿ ಪ್ರಸಾರವಾಗುವ 'ಸರಿಗಮಪ' ಕಾರ್ಯಕ್ರಮ ಧಾರಾವಾಹಿಗಳಿಗಿಂತ ಶ್ರೇಷ್ಠತೆ ಪಡೆದುಕೊಂಡು ವೀಕ್ಷಕರ ಮೆಚ್ಚುಗೆ ಪಡೆದಿದೆ ಎಂದರೆ ಅತಿಶಯೋಕ್ತಿಯಲ್ಲ. ಫೆ.3ರ ಪ್ರಸಾರ ಮನಮಿಡಿಯುವಂತಿತ್ತು. ಹಂಸಲೇಖ ಅವರ ಹೃದಯ ತುಂಬಿದ ಪ್ರೋತ್ಸಾಹದ ನುಡಿಗಳು, ಅರ್ಜುನ್ ಜನ್ಯ, ರಾಜೇಶ್ ಕೃಷ್ಣನ್ ಅವರ ಮಾತುಗಳು, ದುಬೈನಿಂದ ಬಂದ ಕಾನ್ಫಿಡೆಂಟ್ ಸಂಸ್ಥೆಯ ಮುಖ್ಯಸ್ಥರ ಹಣದ ಪ್ರೋತ್ಸಾಹ, ಹನುಮಂತಣ್ಣನ ತಂಗಿಗೆ ನೌಕರಿ ನೀಡುವ ಆಶ್ವಾಸನೆ, ಆ ಇಬ್ಬರೂ ಹಾಡಿದ ಹಾಡು ಮನಮಿಡಿಯುವಂತಿತ್ತು. ಅನುಶ್ರೀ ಅವರ ನಿರೂಪಣೆ ಕಾರ್ಯಕ್ರಮಕ್ಕೆ ಮೆರುಗು ತಂದಿತು. ಫೈನಲ್‌ಗೆ ಯಾರು ಆಯ್ಕೆಯಾಗುವರು ಎಂಬ ಕುತೂಹಲ ವೀಕ್ಷಕರಿಗೆ. ಕಾರ್ಯಕ್ರಮ ಯಶಸ್ವಿಯಾಗಲಿ.

–ಶ್ರೀಧರ ರಾಯಸಂ, ಬೆಂಗಳೂರು

## ಭಾಷೆಗೊಂದು ಮಿತಿ ಬೇಡವೇ?

'ಕಲರ್ಸ್ ಸೂಪರ್'ನ 'ಮಜಾ ಭಾರತ'ದಲ್ಲಿ ಒಂದು ದೃಶ್ಯ: ಪ್ರಥಮ ರಾತ್ರಿಯಂದು ದಂಪತಿ ಮಂಚದ ಮೇಲೆ ಕುಳಿತಿದ್ದಾರೆ. ಮದುಮಗ ಹುಡುಗಿಯಿಂದ ದೂರ ದೂರ ಸರಿಯುವಾಗ ಆಕೆ ಹೀಗೇಕೆ ಎಂದು ಕೇಳಿದಾಗ, ಅವನು ತನಗಿನ್ನೂ 'Set Up' ಆಗಿಲ್ಲ ಎನ್ನುತ್ತಾನೆ. ಈ ಶಬ್ದ ಬರೆದವರಿಗೂ, ಅಭಿನಯಿಸಲು ಒಪ್ಪಿಗೆ ನೀಡಿದವರಿಗೂ, ಇಂತಹ ಹಾಸ್ಯಕ್ಕೆ ಬಿದ್ದು ಬಿದ್ದು ನಗುತ್ತಿದ್ದ ಅಲ್ಲಿನ ನಿರ್ಣಾಯಕರಿಗೂ ಶ್ರೇಷ್ಠ ಪ್ರಶಸ್ತಿ ಸಿಗಲೇ ಬೇಕಲ್ಲವೇ?

–ಸಂತೋಷ, ಸಂದೇಶ, ಕಾರವಾರ

## ಗಾಣ ಸುತ್ತುವ ಎತ್ತು

'ಕಲರ್ಸ್ ಕನ್ನಡ'ದ 'ರಾಧಾ ರಮಣ' ಧಾರಾವಾಹಿ ಎತ್ತು ಗಾಣ ಸುತ್ತಿದಂತೆ ಸುತ್ತಿದ ಕಡೆಯೇ ಸುತ್ತುತ್ತಿದೆಯೇ ಹೊರತು ಯಾವ ಬದಲಾವಣೆಯನ್ನು ಕಂಡಿಲ್ಲ. ಅದೇ ಅವನಿ, ಸಿತಾರಾ, ರಮಣ, ರಾಧಾ, ದಿನಕರ ಇವರ ನಡುವೆಯೇ ಹಾವು ಏಣಿ ಆಟ ಆಡುತ್ತಾ, ತಂತ್ರ ಪ್ರತಿತಂತ್ರಗಳಲ್ಲೇ ಕಳೆದು ಹೋಗುತ್ತಿದೆ. ಇನ್ನೇನು ಮುಗಿದೇ ಹೋಯಿತು ಎಂದಾಗಲೇ ಮತ್ತೆ ಹೊಸ ತಿರುವು ಅನಾವರಣಗೊಳ್ಳುತ್ತಾ, ಮತ್ತೆ ಸೊನ್ನೆಯಿಂದ ಕತೆ ಶುರುವಾಗಿ ವೀಕ್ಷಕರಿಗೆ ತಲೆ ಚಿಟ್ಟು ಹಿಡಿಸುತ್ತಿದೆ.

ವಿವೇಚನೆ ಇಲ್ಲದೆಯೇ ಕಿರುಚಾಡುವ ರಮಣ ಬೇಸರ ತರುತ್ತಾರೆ. ಎಲ್ಲವನ್ನೂ ಸಮಚಿತ್ತದಿಂದ ನಿರ್ವಹಿಸುವ ರಾಧಾ ಈಗಿನ ಸೊಸೆಯಂದಿರಿಗೆ ಮಾದರಿ ಎನಿಸಿ ಬಿಡುತ್ತಾರೆ. ಇವರ ನಡುವೆ ನಯವಂಚನೆಯ ಆಟವಾಡುತ್ತಿರುವ ಸಿತಾರಾ ಖಳನಾಯಕಿಯಾಗಿ ವಿಜೃಂಭಿಸುತ್ತಿದ್ದಾರೆ. ಬೇಗ ಇದಕ್ಕೆ ತಾರ್ಕಿಕ ಅಂತ್ಯ ನೀಡಿ ವೀಕ್ಷಕರನ್ನು ಕಾಪಾಡಲಿ.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ವಾರದ ಪತ್ರ

## ಮುಗ್ಧರ ಅಮಾಯಕತೆ ಬಂಡವಾಳ

ರಿಯಾಲಿಟಿ ಷೋಗಳಲ್ಲಿ ದಿಢೀರನೆ ಪ್ರಸಿದ್ಧಿಗೆ ಬರುವ ಕೆಲವರನ್ನು ಅನಗತ್ಯವಾಗಿ ವಿಜೃಂಭಿಸಲಾಗುತ್ತದೆ. ಅವರ ಮುಗ್ಧತೆ, ಅಮಾಯಕತೆಯನ್ನೇ ಬಂಡವಾಳ ಮಾಡಿಕೊಂಡು ತಮ್ಮ ಟಿ.ಆರ್.ಪಿ. ಹೆಚ್ಚಿಸಿಕೊಳ್ಳುತ್ತವೆ. ಈ ಹಿಂದೆ ರಾಜೇಶ ಎಂಬ ಮುಗ್ಧ ಕಾಡಿನ ಹುಡುಗನನ್ನು ವಿಜೃಂಭಿಸಿ ಆತನ ಸಾವಿಗೆ ಕಾರಣವಾಯ್ತು. ದಿಢೀರನೆ ಪ್ರಸಿದ್ಧಿಗೆ ಬರುವ ಅಮಾಯಕರು ಬಲಿಪಶುಗಳಾಗುತ್ತಾರೆ. ಇತ್ತೀಚೆಗೆ ಝೀ ವಾಹಿನಿಯ ಹನುಮಂತನನ್ನು ಹೀಗೇ ವಿಜೃಂಭಿಸಲಾಗುತ್ತದೆ.

–ಎಸ್. ಅನ್ವಿತಾ, ಹುಂಚ

## ಪುಟ್ಟ ಗೌರಿ ಅಜ್ಜಿ ಆಗದಿರಲಿ

ಪ್ರಸ್ತುತ ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಪುಟ್ಟ ಗೌರಿ ಮದುವೆ' ಧಾರಾವಾಹಿಯಲ್ಲಿ ಸದ್ಯದಲ್ಲಿ ಬರುವ 'ಸೂರ್ಯ' ಪಾತ್ರವು ತೀರಾ ಬೇಜಾರು ಬರಿಸುತ್ತಿದೆ. ಮಾದಕ ವ್ಯಸನಿ, ವಿಕೃತ ಮನಸ್ಸು ಹಾಗೂ ಮೋಸ ವಂಚನೆಗಳ ಮೂರ್ತಿ ಹಾಗಿರುವ ಈ ಪಾತ್ರ ನೋಡುಗರ ಅದರಲ್ಲೂ ಹದಿಹರೆಯದವರಲ್ಲಿ ವಿಕೃತ ಮನಸ್ಸನ್ನು ಹುಟ್ಟು ಹಾಕುತ್ತಿದೆ. ದಯಮಾಡಿ ಕ್ರೌರ್ಯ, ಮಾದಕ ವ್ಯಸನ, ಮೋಸ, ವಿಶ್ವಾಸಘಾತುಕ ತುಂಬಿರುವ ಈ ಧಾರಾವಾಹಿಯನ್ನು ಬೇಗನೇ ಮುಗಿಸಿ ಸಮಾಜಕ್ಕೆ ಒಳ್ಳೆಯ ಅಭಿರುಚಿಯ ಧಾರಾವಾಹಿಯನ್ನು ಪ್ರಸಾರಿಸಲಿ.

–ಆನಂದ್ ಕೃಷ್ಣರಾವ್ ನಾಯಕ್, ಬೆಂಗಳೂರು

## ಸೂಪರ್ ಭೂಪತಿ

ಮಗಳು ಜಾನಕಿ ಧಾರಾವಾಹಿಯಲ್ಲಿ ಚಂದುಭಾರ್ಗಿಯ ಸೆಕ್ರೆಟರಿ ಮೀರಾ ಭೂಪತಿಯ ಪಾತ್ರಧಾರಿಯ ನಟನೆ ಅತ್ಯುತ್ತಮವಾಗಿದೆ. ಆಂತರ್ಯದಲ್ಲಿ ನ್ಯಾಯಪರಳಾಗಿದ್ದು ಬಾಸ್‌ನ ಅಣತಿಯನ್ನು ಮೀರಲಾಗದ ಸಂದಿಗ್ಧ ಪರಿಸ್ಥಿತಿಯನ್ನು ಅತ್ಯಂತ ಮನೋಜ್ಞವಾಗಿ ಅಭಿನಯಿಸಿದ್ದಾರೆ. ಕಣ್ಣುಗಳಲ್ಲೇ ಭಾವನೆ ಸೂಸುವ ಅವರ ನಟನೆ ಅತ್ಯುತ್ತಮ. 'ಮಗಳು ಜಾನಕಿ' ದಿನ ರಾತ್ರಿ 9.30ಕ್ಕೆ ಪ್ರಸಾರವಾಗುತ್ತಿದೆ. 10 ಗಂಟೆಗೆ ಪ್ರಸಾರವಾದರೆ ಉತ್ತಮ. ಪಾತ್ರಗಳು ಅತಿ ಸೂಕ್ಷ್ಮವಾಗಿ ಮೂಡಿ ಬರುತ್ತಿವೆ.

– ಬಿ. ಬಿಲ್ಲೇಶ್ವರ ಅಚ್ಚು, ಹುಂಚ, ವರುಣ್ ಡಂಬಳ, ಬೆಂಗಳೂರು

## ಅರಿವಿನ ವಿಸ್ತಾರ

ಡಾ. ನಾ. ಸೋಮೇಶ್ವರ ಮತದಾರ ಜಾಗೃತಿ ಸಂಬಂಧಿಸಿದಂತೆ ಶಾಲಾ ಮಕ್ಕಳಿಗೆ ನಡೆಸಿಕೊಟ್ಟ ಕ್ವಿಜ್ ಕಾರ್ಯಕ್ರಮ ನಿಜಕ್ಕೂ ಅರಿವು ಮೂಡಿಸಿದೆ. ಮತದಾರನಿಂದ ಹಿಡಿದು ರಾಷ್ಟ್ರಪತಿಯವರೆಗಿನ ಚುನಾವಣೆಯ ಸಣ್ಣ ಸಣ್ಣ ಸಂಗತಿಯೂ ಪ್ರಸ್ತಾಪಿತವಾಗಿ ಅದಕ್ಕೆ ವಿವರಣೆಯನ್ನೂ ನೀಡಿದರು. ಭಾವೀ ಪ್ರಜೆಗಳಾದ ವಿದ್ಯಾರ್ಥಿಗಳ ಪೂರ್ವ ಸಿದ್ಧತೆ ಚೆನ್ನಾಗಿಯೂ ಇತ್ತು. ಬೆಳಗಾವಿ ಜಿಲ್ಲೆಯವರು ರಾಜ್ಯಮಟ್ಟದ ಪ್ರಥಮ ಸ್ಥಾನ ಗಳಿಸಿದ್ದು ಸಂತೋಷದ ಸಂಗತಿ.

ಫೆ.5ರ ಸಂಚಿಕೆಯಲ್ಲಿ ಲೆಕ್ಕದ ಪ್ರಶ್ನೆಯಲ್ಲಿ 485ನ್ನು 9 ರಿಂದ ಭಾಗಿಸಿದರೆ ಭಾಗಲಬ್ಧ 51 ಎಂದು ತಿಳಿಸಿದರು. ಹೇಳಬೇಕೆಂದರೆ 485 ಸಂಖ್ಯೆಯು 9 ರಿಂದ ಪೂರ್ಣ ಭಾಗವಾಗುವುದೇ ಇಲ್ಲ. ಸಿದ್ಧತೆ ಸಮರ್ಪಕವಾಗಿದ್ದು ವೀಕ್ಷಕರಿಗೆ ತಪ್ಪು ಸಂದೇಶ ತಪ್ಪಲಿ.

–ಕೆ.ಎನ್. ಪ್ರಭಾಕರ ಗುಪ್ತ ಹಾಸನ

## ನಾನ್ ಅವಳಲ್ಲ

'ಪುಟ್ಟ ಗೌರಿ ಮದುವೆ'ಯಲ್ಲಿ ಬಂದಿರುವ ಮಂಗಳ ಗೌರಿ 'ನಾನು ಗೌರಿಯ ಹಾಗಲ್ಲ' ಅಂತ ಹೇಳುತ್ತಲೇ ಅಳುಮುಂಜಿಯಾಗಿದ್ದಾಳೆ. ಅಗ್ನಿಸಾಕ್ಷಿ, ಲಕ್ಷ್ಮೀಬಾರಮ್ಮ, ಪುಟ್ಟಗೌರಿ ಧಾರಾವಾಹಿಗಳಲ್ಲಿನ ಅಸಂಬದ್ಧತೆಗಳಿಗೆ ಕೊನೆಯೇ ಇಲ್ಲದಂತಾಗಿದೆ. ದಯವಿಟ್ಟು ಈ ಎಲ್ಲಾ ಧಾರಾವಾಹಿಗಳಿಗೆ ಮುಕ್ತಾಯ ಹಾಡಿದರೆ ಒಳ್ಳೆಯದು.

–ಮಂಜುಳಾ ಟಿ. ಬೆಂಗಳೂರು

## ನಾಲಾಯಕ್ ರಾಜೀವ!

ಕಲರ್ಸ್ ಕನ್ನಡದ 'ಪುಟ್ಟಗೌರಿ ಮದುವೆ' ಅಲ್ಲ 'ಮಂಗಳ ಗೌರಿ ದುರಂತ' ಧಾರಾವಾಹಿಯು ದಿನದಿಂದ ದಿನಕ್ಕೆ ಬೋರು ಹೊಡೆಸುತ್ತಿದೆ. ಹಲವಾರು ವರುಷಗಳಿಂದ ಪ್ರಸಾರವಾಗುತ್ತಿರುವ ಪುಟ್ಟಗೌರಿ ಮದುವೆಯ ಕಥೆಯನ್ನೇ ದಿಕ್ಕು ತಪ್ಪಿಸಿ ಹೊಸ ಹೊಸ ಪಾತ್ರಗಳನ್ನು ಸೃಷ್ಟಿಸಿ ಮುಂದುವರೆಸಿಕೊಂಡು ಹೋಗುವ ಕೆಟ್ಟ ಹಂಬಲ ನಿರ್ದೇಶಕರಿಗೆ ಏಕೋ ಕಾಣೆ? ಅದರಲ್ಲೂ ಇನ್ಸ್‌ಪೆಕ್ಟರ್ ರಾಜೀವನ ಪಾತ್ರವನ್ನು ಮಾಡಲು ಮಂಗಳ ಗೌರಿಯನ್ನು ಮದುವೆಗೆ ಆಗುವ ಆದರ್ಶ ವ್ಯಕ್ತಿಯಾಗಿ ತೋರಿಸಿ, ನಂತರ ಮದುವೆಯಾದ ವಿಷಯವನ್ನು ಮನೆಯವರಿಗೆ ತಿಳಿಸಲು ಹಿಂಜರಿಯುವ ಪುಕ್ಕಲು ಪುಕ್ಕಲು ನಾಲಾಯಕ್ ಇನ್ಸ್‌ಪೆಕ್ಟರ್ ಪಾತ್ರದಲ್ಲಿ ರಾಜೀವ ಸಪ್ಪೆ ಎನಿಸುತ್ತದೆ. ಪೊಲೀಸ್ ಪೇದೆಯವರಿಗೆ ಇರುವ ಕನಿಷ್ಠ ಬುದ್ಧಿವಂತಿಕೆಯು ಇನ್ಸ್‌ಪೆಕ್ಟರ್ ಪಾತ್ರದಲ್ಲಿ ಕಾಣುತ್ತಿಲ್ಲ?

–ಬಿ. ಚಾಮರಾಜ ಅರಸ್, ಮೈಸೂರು

ಮೇಘನಾ ಜಹಗೀರದಾರ ಧಾರವಾಡ